ಮೂರನೇ ವರ್ಷದಲ್ಲಿರುವಾಗ ಪರಸ್ಪರ ಮೋಹಕ್ಕೆ ಬಿದ್ದು, ಮನಸಾರೆ ಒಲಿದು ವರಿಸಿದವರು. ನಾನು ಮರಾಠಿಗ; ದೇಶಸ್ಥ ಬ್ರಾಹ್ಮಣ; ನಾಗಪುರದಲ್ಲಿಯೇ ಹುಟ್ಟಿಬೆಳೆದು ಓದಿಕೊಂಡವನು. ಕನಕದುರ್ಗೆಯದು ತೆಲಂಗಾಣದ ಮೂಲ; ಓದಿನ ಸಲುವಾಗಿ ಐದು ವರ್ಷ ಹಾಸ್ಟೆಲಿನಲ್ಲಿದ್ದವಳು. ಮದುವೆಯಾದ ಮೇಲೆ, ನನ್ನ ಮನಸ್ಸು ನೆಚ್ಚಿದಷ್ಟೇ ನನ್ನ ಮನೆಯನ್ನೂ ಮೆಚ್ಚಿ, ಕಟ್ಟಾ ಮಡಿವಂತೆಯಾದ ನನ್ನ ಅಮ್ಮನ ನೇರಕ್ಕು, ಅವಳು ಮರಾಠಿಗಳೇ ಆಗಿಬಿಟ್ಟಳು. ಮದುವೆಯ ಬಳಿಕ ಐದು ವರ್ಷಗಳ ಕಾಲ, ಇಬ್ಬರೂ ದುಬಾಯಿಯಲ್ಲಿದ್ದೆವು; ದುಡ್ಡು ಮಾಡುವ ಮೇರೆಗೆ. ಆಗಲೇ ನಮ್ಮ ನಡುವೆ ಹೃಷಿ ಅಂತೆಂಬ ಮಗರಾಯನುದಿಸಿ ಬಂದಿದ್ದು. ಅವನು ಹುಟ್ಟುವ ಮೊದಲು ನನ್ನ ಅಮ್ಮ ಹೃಷಿಕೇಶಕ್ಕೆ ಹೋಗಿಬಂದಿದ್ದಳಾಗಿ, ಮೊಮ್ಮಗುವನ್ನು ದೇವರ ಹೆಸರಿಟ್ಟು ಕರೆಯುವುದೆಂದು ತಾಕೀತು ಮಾಡಿದಳು. ಹೃಷಿ ಹುಟ್ಟಿದ ಮರುವರ್ಷಕ್ಕೆಲ್ಲ, ನಾವಿಬ್ಬರೂ ಮರಳಿ ಇಂಡಿಯಾ ಸೇರುವುದೆಂದು ನಿರ್ಧರಿಸಿ—ಮುಂಬಯಿ, ದಿಲ್ಲಿ, ಕಲ್ಕತ್ತಾಗಳಿಗೆ ಹೋಲಿಸಿದರೆ ಬೆಂಗಳೂರೇ ಲೇಸೆಂದುಕೊಂಡು ಬಂದಿಳಿದೆವು. ಹೃಷಿಯಿನ್ನೂ ಆಗಷ್ಟೇ ಎದೆಹಾಲು ಬಿಡಿಸಿಕೊಂಡ ಕೈಗೂಸು. ಕಂಡುಗೊತ್ತಿರದ ಜಾಗ; ಸಿಕ್ಕಾಪಟ್ಟೆ ಕಷ್ಟವಾಯಿತು. ಬನಶಂಕರಿಯಲ್ಲಿ ಮನೆ ಮಾಡಿದೆವು. ಮನೆಯ ಮೊದಲ ಮೊಮ್ಮಗುವೆಂಬ ಮೇರೆಗೆ, ನನ್ನ ಅಮ್ಮ ಹೃಷಿಗೆ ಮೂರು ತುಂಬುವವರೆಗೂ ಒಡನುಳಿದಳು.

ಬೆಂಗಳೂರಿನಲ್ಲಿ ಐದು ವರ್ಷಗಳ ಕಾಲ ಅವರಿವರಲ್ಲಿ ಚಾಕರಿ ಮಾಡಿ, ಬಳಿಕ ನಮ್ಮದೇ ಒಂದು ಆಫೀಸು ಮಾಡಿಕೊಂಡೆವು. ಆಫೀಸಿಗೆ ನನ್ನದೇ ಹೆಸರು; ಈಶಾವಾಸ್ಯಂ. ಈಶಾವಾಸ್ಯಂ ಅಸೋಸಿಏಟ್ಸ್. ಮೊದಮೊದಲು ಸ್ವಂತ ಉದ್ದಿಮೆ ತುಸು ಕಷ್ಟವಾಯಿತಾದರೂ, ಐದಾರು ವರ್ಷಗಳ ಬಳಿಕ ನಿಧಾನವಾಗಿ ಸುಧಾರಿಸಿತು. ಪ್ರಾಜೆಕ್ಟುಗಳಿಗಾಗಲಿ, ಹಣಕ್ಕಾಗಲಿ ಕೊರತೆಯಿರಲಿಲ್ಲ. ಬರೋಬ್ಬರಿ ಇಪ್ಪತ್ತು ವರ್ಷಗಳ ಕಾಲ ಈ ಉದ್ದಿಮೆಯನ್ನು ನಡೆಸಿದೆವು. ಒಡನೊಡನೆ ಡಿಸೈನುಶಾಲೆಯಲ್ಲಿ, ವಾರಕ್ಕೆರಡು ಸರ್ತಿ ವಂತಿಗೆಯೆನ್ನುವ ಹಾಗೆ ಸಂದರ್ಶನ ಮತ್ತು ಅಧ್ಯಾಪನೆ. ಹೃಷಿ ಬೆಳೆದು ದೊಡ್ಡವನಾದ. ಇಲ್ಲಿಯೇ ಕ್ರೈಸ್ಟ್‌ಯೂನಿವರ್ಸಿಟಿಯಲ್ಲಿ ಎಂಬಿಏ, ಎಂಸೀಏ ಓದಿ, ಅದಕ್ಕು ಮುಂದಿನ ಓದಿಗೆಂದು ಅಮೆರಿಕೆಗೆ ಹೋದವನು ವಾಪಸು ಬರಲೇ ಇಲ್ಲ! ಅಲ್ಲಿಯೇ ಕಾಲೇಜಿನಲ್ಲಿ, ಕ್ಷಮಾ ಅಂತೆಂಬ ಮಂಗಳೂರು ಕಡೆಯ ಕನ್ನಡ ಕನ್ನೆಯೊಬ್ಬಳನ್ನು ಮದುವೆಯಾಗಿ ಉಳಿದುಬಿಟ್ಟ. ಅವಳಿ ಮಕ್ಕಳಾದವು. ಕನಕದುರ್ಗೆ, ಈ ಮೊಮ್ಮಕ್ಕಳಾಗುವ ಮೊದಲೊಮ್ಮೆ, ಕ್ಷಮಾಳ ಬಾಣಂತನದ ಸುಮಾರಿನಲ್ಲೊಮ್ಮೆ, ಹೀಗೆ ಎರಡು ಸರ್ತಿ ಮಗನ ಸಂಸಾರವನ್ನು ಕಂಡುಬಂದಳು. ಇಷ್ಟಿದ್ದೂ, ಹೃಷಿ ನನ್ನ ಮಟ್ಟಿಗೇಕೋ ದೂರವೇ ಉಳಿದುಬಿಟ್ಟ. ಅಪ್ಪನಾದ ನನ್ನನ್ನು ದೂರವಿಟ್ಟ. ನನ್ನ ಕುರಿತು ತಾನೇ ಅಸಡ್ಡೆ ಮಾಡಿದನೋ, ಇಲ್ಲಾ ನಾನೇ ಹಾಗೆಂದುಕೊಂಡೆನೋ, ಒಟ್ಟಿನಲ್ಲಿ ನನ್ನ ಬಗ್ಗೆ ಹರಾಶಿವಾ ಅನ್ನಲಿಲ್ಲ. ವಿಚಾರಿಸಿಕೊಳ್ಳಲಿಲ್ಲ. ಇಪ್ಪತ್ತೆಂಟು ವರ್ಷ ಸಾಕಿಸಲಹಿದ ಮಗ, ಮದುವೆಯಾಗಿದ್ದೇ ಕೈಬಿಟ್ಟನೆನ್ನುವುದೇನು ಸಾಮಾನ್ಯವೆ? ಅಸ್ತಿತ್ವವೇ ಕಂಗೆಟ್ಟುಹೋಯಿತು.

ಇದೇ ಬೇಜಾರಿನಲ್ಲಿ, ನಾನು ಕನಕದುರ್ಗೆ ಸಾಕಷ್ಟು ವಿಚಾರ ಮಾಡಿ ಒಂದು ನಿರ್ಣಯಕ್ಕೆ ಬಂದೆವು. ಆ ಕೂಡಲೆ, ಕೆಲಸವನ್ನು ಕಡಿಮೆಗೊಳಿಸಿ, ಹೊಸತಾಗಿ ಬರುವ ಕ್ಲಯಂಟುಗಳನ್ನು ಚಿರಾಗನಲ್ಲಿಗೆ ಸಾಗುಹಾಕಿ, ಎರಡು ವರ್ಷಗಳಲ್ಲಿ ಆಫೀಸು ಬಂದುಗೈದು ಪಶ್ಚಿಮಘಟ್ಟಗಳ ನಟ್ಟನಡುವಿರುವ ಈ 'ಸೀತಾನದಿ'ಯೆಂಬಲ್ಲಿಗೆ ಬಂದು ನೆಲೆಸಿದೆವು. ಮೊಬೈಲುಇಂಟರ್ನೆಟ್ಟುಗಳ ಈ ಸಲೀಸಿನ ಕಾಲದಲ್ಲಿ, ನಮ್ಮನ್ನೊಲ್ಲದ ಮಗನನ್ನು ನೆಚ್ಚಿಕೊಂಡು ಎಲ್ಲಿದ್ದರೇನು,